**ಸಾಕ್ಷಿಯನ್ನು ದಿಃ 27.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 15 ಎಂದು,

ಒಟ್ಟು 5 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.16 ಎಂದು,

ಫಾರಂ ಬಿ ನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 17 ಎಂದು,

ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.18 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಗಾಯಾಳು ನಮ್ಮ ಬಳಿ ನೇರವಾಗಿ ಬಂದಿದ್ದರು. ಗಾಯಾಗಳು ಗುಣಮುಖವಾಗಿ ಆರೋಗ್ಯವಾಗಿರುವ ಕಾರಣ ಆತನನ್ನು ಬಿಡುಗಡೆಗೊಳಿಸಿದ್ದೇವೆ ಎಂದರೆ ಆತನ ಆರೋಗ್ಯ ಸ್ಥಿತಿ ಸ್ಥಿರವಾಗಿದ್ದ ಕಾರಣ ಬಿಡುಗಡೆಗೊಳಿಸಿದ್ದೇವೆ ಎನ್ನುತ್ತಾರೆ. ಬಿಡುಗಡೆಯಾದ ನಂತರ ಹೊರ ರೋಗಿಯಾಗಿ ನಮ್ಮ ಆಸ್ಪತ್ರೆಯಲ್ಲಿ ತೋರಿಸಿಕೊಂಡಿದ್ದು ನಾನು ಹಾಗೂ ಇತರ ವೈದ್ಯರು ಪರೀಕ್ಷಿಸಿದ್ದಾರೆ. ಎಷ್ಟು ಬಾರಿ ಪರೀಕ್ಷಿಸಿದ್ದೇವೆ ಎಂದು ನೆನಪಿಲ್ಲ. ಅರ್ಜಿದಾರರ ವಯಸ್ಸು 42 ಎಂದು ಆಸ್ಪತ್ರೆ ದಾಖಲೆಗಳಲ್ಲಿ ನಮೂದಿಸಿದ್ದೇವೆ ಎಂದರೆ ಸರಿ. ಹೊರರೋಗಿ ದಾಖಲೆ ನಿಪಿ. 10 ರ ಮೊದಲನೇ ಪುಟದಲ್ಲಿ ನಮ್ಮ ಸಹೋದ್ಯೋಗಿ ಅರ್ಜಿದಾರರನ್ನು ಪರೀಕ್ಷಿಸಿದ್ದಾರೆ ಎಂದರೆ ಸರಿ. ಸದರಿ ಪುಟದಲ್ಲಿ No pain while walking, knee braces ಅನ್ನು ಹೆವಿ ವರ್ಕ್ ಮಾಡುವಾಗ ಧರಿಸಲು ಸಲಹೆ ನೀಡಿದ್ದಾರೆ ಎಂದರೆ ಸರಿ. ದಿಃ 03.10.2025 ರಲ್ಲಿ 2 ನೇ ಬಾರಿ ಶಸ್ತ್ರ ಚಿಕಿತ್ಸೆಯಲ್ಲಿ ಅಳವಡಿಸಿದ್ದ ಉಪಕರಣಗಳನ್ನು ತೆಗೆಯಲು ದಾಖಲಾಗಿದ್ದರು ಎಂದರೆ ಸರಿ. ಅವರನ್ನು ಮೂರು ದಿನದ ನಂತರ ಬಿಡುಗಡೆ ಮಾಡಿದ್ದೇವೆ ಎಂದರೆ ಸರಿ. ಅರ್ಜಿದಾರರನ್ನು ಕೊನೆಯದಾಗಿ ದಿಃ 23.10.2025 ರಲ್ಲಿ

ಪರೀಕ್ಷಿಸಿದ್ದೇನೆ ಎಂದರೆ ಸರಿ. ಸದರಿ ದಿನಾಂಕ ಶಸ್ತ್ರ ಚಿಕಿತ್ಸೆ ಮಾಡಿ ಅಳವಡಿಸಿದ ಉಪಕರಣಗಳನ್ನು ತೆಗೆದ ದಿನಕ್ಕೆ ಹತ್ತಿರವಾದ ದಿನವಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ಉಪಕರಣಗಳನ್ನು ತೆಗೆಯಲು ಮಾಡಿದ ಶಸ್ತ್ರ ಚಿಕಿತ್ಸೆಯ ಗಾಯ ಹಾಗೂ ವೂಂಡ್ ಡೆಬ್ರಿಡ್ಮೆಂಟ್ ನ ಗಾಯ ಪೂರ್ಣ ಪ್ರಮಾಣದಲ್ಲಿ ಮಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಶಸ್ತ್ರ ಚಿಕಿತ್ಸೆಯ ಗಾಯಗಳು ಎರಡು ವಾರಗಳಲ್ಲಿ ಗುಣವಾಗುತ್ತವೆ.

2. ದಿಃ 23.10.2025 ರ ಓ.ಪಿ.ಡಿ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ ದಿನಾಂಕದ ಹೊರರೋಗಿ ಚೀಟಿಯಲ್ಲಿ ಗಾಯದ ಸ್ವರೂಪದ ಬಗ್ಗೆ ಏನನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು Thick scar ಎಂದು ನಮೂದಿಸಿದ್ದೇನೆ ಎನ್ನುತ್ತಾರೆ. ಶಸ್ತ್ರ ಚಿಕಿತ್ಸೆ ಮಾಡಿ ಸ್ವಲ್ಪ ದಿನಗಳು ಕಳೆದಿದ್ದ ಕಾರಣ ಅರ್ಜಿದಾರರಿಗೆ ಎರಡು ಸ್ಟೇಬಿಲಿಟಿ ಕಾಂಪೋನೆಂಟ್ ಗಳನ್ನು ಮಾಡಲು ತೊಂದರೆ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರಾಕ್ಸಿಮಲ್ ಟಿಬಿಯಾ ಫ್ರಾಕ್ಚರ್ ಆಗಿದ್ದು ಆ್ಯಂಕಲ್ (ಪಾದಕ್ಕೆ) ಯಾವುದೇ ನ್ಯೂನತೆ ಬರುವುದಿಲ್ಲ ಎಂದರೆ ಸರಿಯಲ್ಲ. ಫಾರಂ ಬಿ ನಲ್ಲಿರುವ ಅಂಕಿ ಅಂಶಗಳನ್ನು ನಾನು ತಿದ್ದಿದ್ದೇನೆ ಎಂದರೆ ಸರಿ. ನಾರ್ಮಲ್ ರೇಂಜ್ ಆಫ್ ಮೂಮೆಂಟ್ ಅನ್ನು ತಿದ್ದಿದ್ದೇನೆ ಎನ್ನುತ್ತಾರೆ. ನಾರ್ಮಲ್ ರೇಂಜ್ ಆಫ್ ಮೂಮೆಂಟ್ ಅನ್ನು ವ್ಯಕ್ತಿಯ ಮತ್ತೊಂದು ಆರೋಗ್ಯ ಪೂರ್ಣ ಕಾಲನ್ನು ಪರೀಕ್ಷಿಸಿ ಸಹ ಬರೆಯುತ್ತೇವೆ ಎಂದರೆ ಸರಿ. ಫಾರಂ ಬಿ ಅನ್ನು ನನ್ನ ಪೂರ್ವ ನಿರ್ಧರಿತ ನ್ಯೂನತೆಗೆ ಸರಿ ಹೊಂದುವಂತೆ ತಿದ್ದಿದ್ದೇನೆ ಎಂದರೆ ಸರಿಯಲ್ಲ. ನೀ ಕಾಂಟ್ರಿಬ್ಯೂಷನ್ ಅನ್ನು ಶೇಕಡ 35 ರಷ್ಟು ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಆ್ಯಂಕಲ್ ಸಂಬಂಧಿಸಿದಂತೆ ನಾನು ಹೇಳಿದಷ್ಟು ಪ್ರಮಾಣದಲ್ಲಿ ನ್ಯೂನತೆ ಅರ್ಜಿದಾರರಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ಮಜಲ್ ಪವರ್ ಬಗ್ಗೆ ನಾನು ಮಾಡಿರುವ ಲೆಕ್ಕಾಚಾರ ತಪ್ಪಾಗಿದೆ ಎಂದರೆ ಸರಿಯಲ್ಲ. ಮಜಲ್ ಪವರ್ ಬಗ್ಗೆ 0.30 ನಿಂದ ಗುಣಿಸಬೇಕು ಎಂದರೆ ಸರಿಯಲ್ಲ. ಆದ ಕಾರಣ ನಾನು ಮಾಡಿರುವ ನ್ಯೂನತಾ ಲೆಕ್ಕಾಚಾರ ಗೈಡ್ ಲೈನ್ಸ್ ಪ್ರಕಾರ ಇಲ್ಲ ಎಂದರೆ ಸರಿಯಲ್ಲ.

3. ಗಾಯ ಆದ ಎರಡು ವರ್ಷದ ನಂತರ ನಾನು ಪರೀಕ್ಷಿಸಿ ನ್ಯೂನತೆಯನ್ನು ನಿರ್ಧರಿಸಿದ್ದು ನಾನು ನಿರ್ಧರಿಸಿರುವ ಮಟ್ಟದಲ್ಲಿ ನ್ಯೂನತೆ ಇಲ್ಲ ಎಂದರೆ ಸರಿಯಲ್ಲ. ದಿಃ 23.10.2025 ರ ನಂತರದ ಅರ್ಜಿದಾರರ ಆರೋಗ್ಯ ಸ್ಥಿತಿ ಬಗ್ಗೆ ನನ್ನಿಂದ ಹೇಳಾಗುವುದಿಲ್ಲ ಎಂದರೆ ಸರಿಯಲ್ಲ. ಅವರ ಸ್ಥಿತಿಗತಿಯಲ್ಲಿ ಯಾವುದೇ ವೆತ್ಯಾಸ ಆಗಿರುವುದಿಲ್ಲ ಎನ್ನುತ್ತಾರೆ. ಅರ್ಜಿದಾರರಿಗೆ ಸಹಾಯ ಮಾಡಲು ಅವರ ಆರೋಗ್ಯದಲ್ಲಿ ಯಾವುದೇ ವೆತ್ಯಾಸ ಆಗಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವ ಪ್ರಮಾಣದಲ್ಲಿ ಅರ್ಜಿದಾರರಿಗೆ ನ್ಯೂನತೆ ಇಲ್ಲ ಎಂದರೆ ಸರಿಯಲ್ಲ. 2024 ರಲ್ಲೇ ಅರ್ಜಿದಾರರಿಗೆ ಅವರ ಕೆಲಸ ಮಾಡಿಕೊಳ್ಳಲು ಶಕ್ತರಿದ್ದ ಕಾರಣ ನಾನು ನೀಡಿರುವಷ್ಟು ನ್ಯೂನತೆ ಇರುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ಫಾರಂ ಬಿ ಗೆ ನಾನೊಬ್ಬನೆ ಸಹಿ ಮಾಡಿದ್ದು ಮೆಡಿಕಲ್ ಬೋರ್ಡ್ ಕಮಿಟಿ ಮಾಡಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.